ಕುಂದಾಪುರ ತಾಲ್ಲೂಕು ಅಮಾಸೆಬೈಲು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಬಗ್ಗೆ

೧೦೦೫ ಶ್ರೀ ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ).— ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿಸುವರೆ ?

೧) ಕುಂದಾಪುರ ತಾಲ್ಲೂಕು ಅಮಾಸೆಬೈಲು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇರುವ ತರಗತಿಯ ಕೊಠಡಿಗಳ ಸಂಖ್ಯೆ ಎಷ್ಟು ?

೨) ಸದರಿ ಶಾಲೆಯಲ್ಲಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು, ಹಾಗೂ ಅಧ್ಯಾಪಕರ ಸಂಖ್ಯೆ ಎಷ್ಟು ?

೩) ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಉಪಾಧ್ಯಾಯರ ನೇಮಕವಾಗಿದೆಯೇ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

೧ ಜಿ.

ವಿದ್ಯಾರ್ಥಿಗಳು	—	೨೧೦
ವಿದ್ಯಾರ್ಥಿನಿಯರು	—	೧೫೯
ಒಟ್ಟು	—	೩೬೯

ಕೆಲಸ ಮಾಡುತ್ತಿರುವ ಶಿಕ್ಷಕರ ಸಂಖ್ಯೆ .ಜಿ

೩) ಇಲ್ಲ,
ಇಬ್ಬರು ಶಿಕ್ಷಕರ ಕೊರತೆ ಇದೆ.

ಮಂಜೂರಾಗಿರುವ ತಾರ್ ರಸ್ತೆ ಪೂರ್ಣ ಮಾಡುವ ಬಗ್ಗೆ

೧೦೬೬ ಶ್ರೀ ಬಿ. ಎಸ್. ಯಂಡಿಗೂರಪ್ಪ (ಶಿಕಾರಿಪುರ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಈವರೆಗೆ ಶಿಕಾರಿಪುರ ತಾಲ್ಲೂಕಿನಲ್ಲಿ ಬೇರೆ ಬೇರೆ ಬಾಬುಗಳಲ್ಲಿ ಡಾಂಬರ್ ರಸ್ತೆ ಮಾಡಲು ಣ ಮಂಜೂರಾಗಿರುವ ರಸ್ತೆಗಳ ಹೆಸರುಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಮತ್ತು ನೀರಾವರಿ ಸಚಿವರು).—

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ೧೯೬೫–೮೭ನೇ ಸಾಲಿನಲ್ಲಿ ಡಾಂಬರ್ ರಸ್ತೆ ಮಾಡಲು ಈವರೆಗೆ ೬ ಕೆಲಸಗಳು ಮಂಜೂರಾಗಿರುತ್ತದೆ. ಇವುಗಳ ವಿವರಗಳನ್ನೊಳಗೊಂಡ ಪಟ್ಟಿಯನ್ನು ಪಿನುಬಂಗ ರಲ್ಲಿ ಕೊಡಲಾಗಿದೆ.